## Second Semester of Three Year LL.B. Examination, June 2011
## CONTRACT – II (Course – I)

Duration : 3 Hours | Max. Marks : 100

**Instructions** : 1. Answer all **5** questions.

2. **One** essay type and **one** short note question or problem from **each unit** have to be attempted, which is referred as part (a) and (b) in all the units.
3. Figures to the **right** indicate marks.
4. Answer should be written **either** in English or Kannada **completely**.

### UNIT – I

Q. No. 1. (a) Define contract of guarantee. State the distinctions between contract of guarantee and contract of indemnity. Marks : 15

ಜಾಮೀನುದಾರಿಕೆ ಕರಾರನ್ನು ವ್ಯಾಖ್ಯಾನಿಸಿ. ಜಾಮೀನುದಾರಿಕೆ ಕರಾರು ಮತ್ತು ನಷ್ಟ ಭರ್ತಿ ಕರಾರುಗಳ ನಡುವೆ ಇರುವ ವ್ಯತ್ಯಾಸಗಳನ್ನು ಹೇಳಿರಿ.

OR/**ಅಥವಾ**

Define Pledge and explain the rights of Pawnee.

ಗಿರವಿಯನ್ನು ವ್ಯಾಖ್ಯಾನಿಸಿ ಮತ್ತು ಗಿರವಿ ಇಟ್ಟುಕೊಂಡವನ ಹಕ್ಕುಗಳನ್ನು ವಿವರಿಸಿರಿ.

(b) 'A' lends his horse for riding to "B". "A" knows that the horse is vicious and unsafe for riding but does not disclose the same to 'B'. 'B' rides the horse. "B" is thrown and injured "B" files a suit against 'A' to recover damages. Decide. Marks : 5

'ಅ' ನು ತನ್ನ ಕುದುರೆಯನ್ನು 'ಬ' ನಿಗೆ ಹತ್ತಲು ಕೊಡುತ್ತಾನೆ. 'ಅ' ನಿಗೆ ತನ್ನ ಕುದುರೆ ದುಷ್ಟ ಹಾಗೂ ಹತ್ತಲು ಅಯೋಗ್ಯವಾಗಿದೆ ಎಂಬುದು ಗೊತ್ತಿದೆ. ಆದರೆ ಅದನ್ನು 'ಬ' ನ ಮುಂದೆ ಬಹಿರಂಗಪಡಿಸುವುದಿಲ್ಲ. 'ಬ' ನು ಕುದುರೆಯನ್ನು ಹತ್ತುತ್ತಾನೆ. 'ಬ' ನು ಬಿದ್ದು ಗಾಯಗೊಳ್ಳುತ್ತಾನೆ. 'ಬ' ನು 'ಅ' ನ ವಿರುದ್ಧ ಪರಿಹಾರ ಕೋರಿ ದಾವೆ ಹೂಡುತ್ತಾನೆ. ನಿರ್ಧರಿಸಿರಿ.

OR/**ಅಥವಾ**

'A' entrusted some books to 'B' for binding. 'B' promised to complete the work and return the same within ten days. 'B' failed to return the books within agreed time. Subsequently the books were burnt in an accidental fire on his premises Can A recover damages from 'B' for the loss of his books ?

'ಅ' ನು ' ಬ' ನಿಗೆ ಕೆಲವು ಪುಸ್ತಕಗಳನ್ನು ಬೈಂಡು ಮಾಡಲು ಒಪ್ಪಿಸಿದನು. 'ಬ' ನು ಆ ಕೆಲಸವನ್ನು ಹತ್ತು ದಿನಗಳಲ್ಲಿ ಮಾಡಿ ಅವುಗಳನ್ನು ಮರಳಿಸುವುದಾಗಿ ವಾಗ್ದಾನ ಮಾಡಿದನು. 'ಬ' ನು ಆ ಒಪ್ಪಂದದ ವೇಳೆಯೊಳಗೆ ಅವುಗಳನ್ನು ಮರಳಿಸುವಲ್ಲಿ ವಿಫಲನಾದನು. ಅದಾದ ಮೇಲೆ ಆ ಪುಸ್ತಕಗಳು ಆಕಸ್ಮಿಕ ಬೆಂಕಿಯಿಂದ ಅವನ ಕಟ್ಟಡದಲ್ಲಿಯೇ ನಾಶವಾದವು. 'ಅ' ನು 'ಬ' ನಿಂದ ಆ ಪುಸ್ತಕಗಳ ನಾಶಕ್ಕೆ ಪರಿಹಾರ ಕೇಳಬಹುದೇ ?

## UNIT – II

Q. No. 2. (a) Explain the duties of an agent. Marks : 15

ಕಾರ್ಯಭಾರಿಯ ಕರ್ತವ್ಯಗಳನ್ನು ವಿವರಿಸಿರಿ.

OR/**ಅಥವಾ**

Who is an agent ? Explain the different modes of termination of agency.

ಕಾರ್ಯಭಾರಿ ಎಂದರೆ ಯಾರು ? ಕಾರ್ಯಭಾರದ ಕರಾರನ್ನು ವಿಸರ್ಜಿಸುವ ವಿಧಾನಗಳನ್ನು ವಿವರಿಸಿರಿ.

(b) Write short note on "agency by ratification". Marks : 5

''ದೃಢೀಕರಣದ ಮೂಲಕ ಆಗುವ ಕಾರ್ಯಭಾರದ'' ಮೇಲೆ ಲಘು ಟಿಪ್ಪಣಿ ಬರೆಯಿರಿ.

OR/**ಅಥವಾ**

Write short note on 'Sub-agent'.

'ಉಪಕಾರ್ಯಭಾರಿ' ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

## UNIT – III

Q. No. 3. (a) Explain the rights and duties of a partner in a partnership firm. Marks : 15

ಪಾಲುಗಾರಿಕೆ ಸಂಸ್ಥೆಯಲ್ಲಿ ಪಾಲುಗಾರರು ಹೊಂದಿರುವ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ವಿವರಿಸಿರಿ.

OR/**ಅಥವಾ**

Discuss the different methods of dissolution of partnership firm.

ಪಾಲುಗಾರಿಕೆ ಸಂಸ್ಥೆಯನ್ನು ಮುಕ್ತಾಯಗೊಳಿಸುವ ವಿವಿಧ ವಿಧಾನಗಳನ್ನು ಚರ್ಚಿಸಿರಿ.

(b) A, B and C are partners in a partnership business. 'C' retires without giving a public notice. 'D' an old costumer deals with the firm without notice of change. 'D' wants to hold 'C' also liable. Decide. Marks : 5

ಅ, ಬ ಮತ್ತು ಕ ರು ಒಂದು ಪಾಲುದಾರಿಕೆ ವ್ಯವಹಾರದಲ್ಲಿ ಪಾಲುಗಾರರಾಗಿರುತ್ತಾರೆ. 'ಕ' ನು ಸಾರ್ವಜನಿಕ ಸೂಚನೆಯನ್ನು ಕೊಡದೆ ನಿವೃತ್ತಿಯಾಗುತ್ತಾನೆ. 'ಡ' ಎಂಬ ಹಳೆಯ ಗ್ರಾಹಕನು ಬದಲಾವಣೆಯ ಅರಿವಿಲ್ಲದೆ ಪಾಲುಗಾರಿಕೆ ಸಂಸ್ಥೆಯೊಂದಿಗೆ ವ್ಯವಹರಿಸುತ್ತಾನೆ. 'ಡ' ನು 'ಕ' ನನ್ನು ಸಹ ಹೊಣೆಗಾರನನ್ನಾಗಿ ಮಾಡಲು ಇಚ್ಛಿಸುತ್ತಾನೆ. ನಿರ್ಧರಿಸಿರಿ.

OR/**ಅಥವಾ**

'A' and 'B' agree to work together as carpenters. According to the agreement,'A' shall receive all profits and shall pay Rs. 5,000 per month to 'B' as wages. Discuss whether A and B are partners.

'ಅ' ಮತ್ತು 'ಬ' ಇವರು ಒಟ್ಟಿಗೆ ಬಡಿಗತನದ ಕೆಲಸವನ್ನು ಮಾಡಲು ಒಪ್ಪಿಕೊಳ್ಳುತ್ತಾರೆ. ಒಪ್ಪಂದದ ಪ್ರಕಾರ 'ಅ' ನು ಎಲ್ಲಾ ಲಾಭವನ್ನು ಪಡೆದು ''ಬ'' ನಿಗೆ ಪ್ರತಿ ತಿಂಗಳು 5,000 ರೂಪಾಯಿ ಸಂಬಳ ಕೊಡತಕ್ಕದ್ದು. ''ಅ'' ಮತ್ತು ''ಬ'' ಇವರು ಪಾಲುದಾರರಾಗುತ್ತಾರೆಯೇ? ಚರ್ಚಿಸಿರಿ.

## UNIT – IV

Q. No. 4. (a) Define Contact of Sale. State the distinctions between sale and agreement to sell. Marks : 15

ಮಾರಾಟ ಕರಾರನ್ನು ವ್ಯಾಖ್ಯಾನಿಸಿ. ಮಾರಾಟ ಮತ್ತು ಮಾರಾಟ ಒಪ್ಪಂದ ಇವುಗಳೊಳಗಿನ ವ್ಯತ್ಯಾಸಗಳನ್ನು ಹೇಳಿರಿ.

OR/**ಅಥವಾ**

Explain the concept of "caveat emptor". State the exceptions to this rule.

''ಕೊಳ್ಳುವವನೆ ಎಚ್ಚರಿಕೆ'' ಯ ಪರಿಕಲ್ಪನೆಯನ್ನು ವಿವರಿಸಿರಿ. ಈ ನಿಯಮಕ್ಕಿರುವ ಅಪವಾದಗಳನ್ನು ಹೇಳಿರಿ.

(b) A, B and C are joint owners of a horse. The horse is in possession of 'C'with the permission of A and B. They have not authorised 'C' to sell the horse. 'C' sells the horse to 'D' a bonafide purchaser. A and B contend that the sale is void. Decide. Marks : 5

'ಅ', 'ಬ' ಮತ್ತು 'ಕ' ಇವರು ಒಂದು ಕುದುರೆಯ ಜಂಟಿ ಯಜಮಾನರು ಆಗಿದ್ದಾರೆ. 'ಅ' ಮತ್ತು 'ಬ' ಇವರ ಸಮ್ಮತಿಯ ಮೇರೆಗೆ ಕುದುರೆಯು 'ಕ' ನ ಸ್ವಾಧೀನದಲ್ಲಿ ಇದೆ. 'ಅ' ಮತ್ತು 'ಬ' ಇವರು 'ಕ' ನಿಗೆ ಕುದುರೆಯನ್ನು ಮಾರಾಟ ಮಾಡಲು ಅನುಮತಿ ಕೊಟ್ಟಿಲ್ಲ. 'ಕ' ನು ಕುದುರೆಯನ್ನು 'ಡ' ಎಂಬವನಿಗೆ ಮಾರುತ್ತಾನೆ. 'ಡ' ನು ಆ ಕುದುರೆಯನ್ನು ಸದ್ಭಾವನೆಯಿಂದ ಕೊಂಡಿರುತ್ತಾನೆ. 'ಅ' ಮತ್ತು 'ಬ' ಇವರು ಮಾರಾಟ ಶೂನ್ಯ ಎಂದು ವಾದಿಸುತ್ತಾರೆ ನಿರ್ಣಯಿಸಿರಿ.

OR/**ಅಥವಾ**

'A' gave a golden ring to 'B' on "Sale or return" basis and asked 'B' to return the ring within ten days in the case of non approval . 'B' pledged the ring with 'C' without informing 'A' of his approval to purchase the ring. When price was not paid by 'B'. "A" filed a suit against 'C' to recover the ring. Decide.

'ಅ' ನು 'ಬ' ನಿಗೆ ಒಂದು ಬಂಗಾರದ ಉಂಗುರವನ್ನು ''ಮಾರಾಟ ಅಥವಾ ಮರಳಿಸುವಿಕೆ'' ಆಧಾರದ ಮೇಲೆ ಕೊಟ್ಟನು ಮತ್ತು ಒಪ್ಪದಿದ್ದರೆ ಹತ್ತು ದಿವಸದೊಳಗಾಗಿ ಮರಳಿಸಲು ತಿಳಿಸಿದನು. 'ಬ' ನು ಉಂಗುರವನ್ನು ಖರೀದಿಸುವ ಸಮ್ಮತಿಯನ್ನು 'ಅ' ನಿಗೆ ತಿಳಿಸದೆ 'ಕ' ನಲ್ಲಿ ಗಿರವಿ ಇಟ್ಟನು. 'ಬ' ನು 'ಅ' ನಿಗೆ ಹಣ ಸಂದಾಯ ಮಾಡದಿದ್ದಾಗ, 'ಅ' ನು 'ಕ' ನ ವಿರುದ್ಧ ಉಂಗುರ ಮರಳಿ ಪಡೆಯಲು ದಾವೆ ಹೂಡಿದನು. ನಿರ್ಣಯಿಸಿರಿ.

## UNIT – V

Q. No. 5. (a) Discuss the rights and obligations of hirer under the Hire purchase agreement. Marks : 15

ಬಾಡಿಗೆ ಖರೀದಿ ಒಪ್ಪಂದದಲ್ಲಿ ಬಾಡಿಗೆಗೆ ತೆಗೆದುಕೊಳ್ಳುವವನ ಹಕ್ಕುಗಳ ಮತ್ತು ಹೊಣೆಗಾರಿಕೆಗಳ ಬಗ್ಗೆ ಚರ್ಚಿಸಿರಿ.

OR/**ಅಥವಾ**

Define Hire purchase agreement. State the distinctions between sale and hire purchase agreement.

ಬಾಡಿಗೆ ಖರೀದಿ ಒಪ್ಪಂದವನ್ನು ವ್ಯಾಖ್ಯಾನಿಸಿ. ಮಾರಾಟ ಮತ್ತು ಬಾಡಿಗೆ ಖರೀದಿ ಒಪ್ಪಂದ ಇವುಗಳ ನಡುವೆ ಇರುವ ವ್ಯತ್ಯಾಸಗಳನ್ನು ಹೇಳಿರಿ.

(b) Write a short note on contents of hire-purchase agreement. Marks : 5

ಬಾಡಿಗೆ ಖರೀದಿ ಒಪ್ಪಂದ ಒಳಗೊಂಡಿರಬೇಕಾದ ವಿಷಯಗಳ ಕುರಿತು ಲಘು ಟಿಪ್ಪಣಿ ಬರೆಯಿರಿ.

OR/**ಅಥವಾ**

Write a short note on 'implied-warranties'.

'ಅವ್ಯಕ್ತ ಭರವಸೆಗಳ' ಕುರಿತು ಲಘು ಟಿಪ್ಪಣಿ ಬರೆಯಿರಿ.